




ಯಶಸ್ವಿಯಾಗಿ ಹಿಮಾಲಯ ಪರ್ವತವನ್ನು ಹತ್ತಿ ಬಿಟ್ಟೆನೆಂಬಂತಂತೆ ಖುಷಿ ಪಟ್ಟದ್ದಿದೆ. ಆದರೆ, ನಂತರದಲ್ಲಿ ಬಂದ ಆತನ ಅಪ್ಪರ್ ಕೇಜಿಯ ಮಿಸ್ ಈತನಿಗೆ ಮಗ್ಗಿ ಕಲಿಸುವುದರಲ್ಲಿ ಪದೇ ಪದೇ ಸೋತಾಗ, ಸ್ವತಃ ಆಕೆಯೇ ತಾಳ್ಮೆ ಕಳೆದುಕೊಂಡು, ನೇರವಾಗಿ ಅಪ್ಪ ಅಕ್ಷಯಕುಮಾರನಿಗೇ 'ಬುಲಾವ್' ಕಳಿಸಿ, ಆ ಕೆಲಸವನ್ನು ಆತನ ಹೆಗಲಿಗೇರಿಸಿ, ಮಗು ಕೌಶಿಕನ ನೆಮ್ಮದಿಯ ಬದುಕಿಗೆ ಕೊಳ್ಳಿ ಹಿಡಿಸಿಬಿಟ್ಟಿದ್ದಳು. ಹೀಗೆ ಅಪ್ಪರ್ ಕೇಜಿಯ ಮಗ್ಗಿಯನ್ನು ಮಗನಿಗೆ ಕಲಿಸುವುದು, ಅಪ್ಪ ಅಕ್ಷಯಕುಮಾರನ ಜವಾಬ್ದಾರಿಯಾದ ನಂತರದಲ್ಲಿ... ದಿನವೂ ಅಪ್ಪನ ಕೈಯಿಂದ ಕೌಶಿಕನಿಗೆ ಏಟಿನ ಸುರಿಮಳೆಯೇ ಶುರುವಾಗಿತ್ತು. ಮಗುವಿನ ತಲೆಗೆ ಈ 'ಮಗ್ಗಿಯ ಲಾಜಿಕ್' ಹತ್ತುತ್ತಿಲ್ಲ. ಆದರೆ ಅದನ್ನು ಆತನ ಬುರುಡೆಗೆ ಹತ್ತಿಸಲೇಬೇಕೆಂಬ ಪ್ರಯತ್ನ ಅಪ್ಪನದ್ದು. ಆದರೆ ಆ ಪ್ರಯತ್ನದಲ್ಲಿ ಮಗುವು ಅಪ್ಪನಿಂದ ಆ ಪರಿಯಲ್ಲಿ ಏಟು ತಿನ್ನುವುದನ್ನು ನೋಡಲಾಗದ ಕುಮುದಳು ಒಮ್ಮೊಮ್ಮೆ ನಡುವೆ ಬಂದು–

"ಅದು ಮಗು ಅಂತ ಗೊತ್ತಾಗುದಿಲ್ವ ನಿಮಗೆ ? ಯಾಕೆ ಹಾಗೆ ಹೊಡಿತಿದ್ದೀರಿ ? ಅಂವ ಮುಂದೆ ದೊಡ್ಡವನಾದ ಮೇಲೆ ಸರಿಹೋಗ್ತಾನೆ. ಇಲ್ಲಿ ಮನೆಯಲ್ಲಿ... ನಿಮ್ಮ ಮುಂದೆ ಮಗ್ಗಿ ಹೇಳುದಕ್ಕೆ ಭಯ ಅವನಿಗೆ... ಶಾಲೆಯಲ್ಲಿ ಸರಿ ಬರಿತಾನಂತೆ; ಈಗ ಅವನಿಗೆ ಪಾಸಾಗುವಷ್ಟು ಮಾರ್ಕ್ಸ್ ಬರ್ತಾಯಿದೆ ಅಲ್ವ... ಸಾಕು, ಇನ್ನೇನು..."

"ಹೂಂ... ಸರಿ ಹೋಗ್ತಾನೆ... ಹೋಗ್ತಾನೆ; ನೀನು ಸರಿ ಹೋಗಿ ಈಗ ದೊಡ್ಡ ಗಣಿತ ಶಾಸ್ತ್ರಜ್ಞೆ ಆಗಿದ್ದಿಯಲ್ಲ ಹಾಗೆ... ಈಗ ಇವನಿಗೆ ಬರ್ತಾ ಇರುವ ಮಾರ್ಕ್ಸ್ ನೋಡಿದ್ದೀವಲ್ವ ಚೆನ್ನೆಮಣೆಯ ಕಾಯಿಗಳಷ್ಟು, ಕೈಕಾಲುಗಳ ಬೆರಳುಗಳಷ್ಟು !! ಅಲ್ಲವೇ, ಅಷ್ಟು ಮಾರ್ಕ್ಸ್